<u>ದಿನಾಂಕ **07-07-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>

<u>ಪಾಟೀ ಸವಾಲುಃ **1** ಮತ್ತು **3** ನೇ ಪ್ರತಿವಾದಿ ಪರ ಶ್ರೀ ಬಿ.ಎಸ್ ವಕೀಲರಿಂದ</u>

ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಗೊತ್ತು. ನನ್ನ ತಂದೆ ಬಸವಂತರಾಯ ಮೃತಪಟ್ಟು 11 ವರ್ಷ ಆಗಿರುತ್ತದೆ. ನನ್ನ ತಾಯಿ ಬಸ್ಸಮ್ಮ ಮೃತಪಟ್ಟು 15 ವರ್ಷ ಆಗಿರುತ್ತದೆ. ನಾವು 6 ಜನ ಮಕ್ಕಳು ಇರುತ್ತೇವೆ. ಅವರುಗಳು ಶರಣಮ್ಮ, ಶಾರದಮ್ಮ, ಅಕ್ಕನಾಗಮ್ಮ, ಸುಧ, ಶಾಂತಮ್ಮ ಮತ್ತು ಮೀನಾಕ್ಷಮ್ಮ ಇರುತ್ತಾರೆ. ಶರಣಮ್ಮ ಮತ್ತು ಶಾರದಮ್ಮ ಮೃತಪಟ್ಟಿರುತ್ತಾರೆ. ನನ್ನ ತಂದೆ ತಾಯಿಗೆ ಮಲ್ಲಮ್ಮ ಎಂಬ ಮಗಳು ಇದ್ದು ಅವಳು ಶರಣಗೌಡ ಗಂಡನನ್ನು ಬಿಟ್ಟು ಮೃತಪಟ್ಟಿರುತ್ತಾಳೆ ಎಂದರೆ ಸಾಕ್ಷಿಯು ಮಲ್ಲಮ್ಮ ಚಿಕ್ಕವಳಿರುವಾಗಲೇ ಮೃತಪಟ್ಟಿರುತ್ತಾಳೆ ಎಂದು ನುಡಿಯುತ್ತಾರೆ. ಮಲ್ಲಮ್ಮಳ ಗಂಡ ಶರಣಗೌಡ ಜೀವಂತ ಇರುತ್ತಾನೆ ಸಾಕ್ಷಿ ಮುಂದುವರೆದು ಈತನು ಬೇರೆಯವರನ್ನು ಮದುವೆ ಆಗಿರುತ್ತಾನೆ.

ಶರಣಮ್ಮಳ ಗಂಡನ ಹೆಸರು ಗುಂಡಪ್ಪ ಈಗಾಗಲೇ ಮೃತಪಟ್ಟಿರುತ್ತಾನೆ. ಶರಣಮ್ಮಳಿಗೆ ಮಹಾದೇವಮ್ಮ ಮತ್ತು ರತ್ನಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಇರುತ್ತಾಳೆ. ನನ್ನ ವಾದ ಪತ್ರದ ವಂಶಾವಳಿಯಲ್ಲಿ ಜೀವಂತ ರತ್ನಮ್ಮಳನ್ನು

ತೋರಿಸಿರುವುದಿಲ್ಲ. ಶಾರದಮ್ಮ ಗಂಡನ ಹೆಸರು ಸಂಗನಗೌಡ ಇರುತ್ತದೆ. ಶಾರದಮ್ಮಳಿಗೆ ಮಲ್ಲಿಕಾರ್ಜುನ, ನಾಗರಾಜ ಮತ್ತು ಮಲ್ಲಮ್ಮ ಎಂಬ 3 ಜನ ಮಕ್ಕಳು ಇರುತ್ತಾರೆ. ಅವರಲ್ಲಿ ಮಲ್ಲಮ್ಮ ಮೃತಪಟ್ಟಿರುತ್ತಾಳೆ. ಸದರಿ ಮೃತ ಮಲ್ಲಮ್ಮಳ ಗಂಡನ ಹೆಸರು ರೆಡ್ಡಪ್ಪ ಇರುತ್ತದೆ. ಸದರಿ ಮೃತ ಮಲ್ಲಮ್ಮಳಿಗೆ ರೆಡ್ಡಪ್ಪ ಮತ್ತು ಮಲ್ಲಮ್ಮ ಎಂಬ ಮಕ್ಕಳು ಇರುತ್ತಾರೆ. ನನ್ನ ವಾದ ಪತ್ರದ ವಂಶಾವಳಿಯಲ್ಲಿ ಮೃತ ಶರದಮ್ಮಳ ವಾರಸುದಾರರು ನಾಗರಾಜ ಮತ್ತು ಮಲ್ಲಮ್ಮಳ ವಾರಸುದಾರರ್‍ನ ತೋರಿಸಿಲ್ಲ ಎಂದರೆ ಸರಿ. ಶರಣಮ್ಮ ಮತ್ತು ಶಾರದಮ್ಮ ಇವರ ಎಲ್ಲ ವಾರಸುದಾರರ್‍ನ ತೋರಿಸದೇ ಕೇವಲ ಮಹಾದೇವಮ್ಮ ಮತ್ತು ಮಲ್ಲಿಕಾರ್ಜುನ ಮಾತ್ರ ತೋರಿಸಿರುತ್ತೇನೆ ಎಂದರೆ ಸರಿ. ನನ್ನ ತಂದೆ 7 ನೇ ಮಗಳು ಮಲ್ಲಮ್ಮ ಮದುವೆಯಾಗಿ ಮ್ಕಕಳು ಇಲ್ಲದೇ ಮೃತಪಟ್ಟ ವಿಚಾರವನ್ನು ನಮೂದು ಮಾಡಿಲ್ಲ ಎಂದರೆ ಸರಿ.

ನನ್ನ ತಂದೆ ಹೆಸರಿೆ ಒಟ್ಟು 11 ಎಕರೆ ಜಮೀನು ಇರುತ್ತದೆ. ಬೇರೆ ಆಸ್ತಿಗಳು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. 1986 ರಲ್ಲಿ ನನ್ನ ತಂದೆ ಜೀವಂತಕಾಲದಲ್ಲಿ 6 ಜನ ಹೆಣ್ಣು ಮಕ್ಕಳಿಗೆ ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಟ್ಟಿದ್ದನು ಎಂದರೆ ನನಗೆ ಗೊತ್ತಿಲ್ಲ. 1986 ರ ವಿಭಾಗದಲ್ಲಿ ಅಕ್ಕನಾಗಮ್ಮ, ಸುಧಾ ಇವರಿಗೆ ಸ.ನಂ.56 ರಲ್ಲಿ ತಲಾ 3 ಎಕರೆ ಜಮೀನು ನೀಡಲಾಗಿತ್ತು ಎಂದರೆ ಸರಿಯಲ್ಲ. ಮಿನಾಕ್ಷಮ್ಮಳಿಗೆ ಸ.ನಂ.56 ರಲ್ಲಿ 5 ಎಕರೆ 12 ಗುಂಟೆ ಜಮೀನು ನೀಡಲಾಗಿತ್ತು ಎಂದರೆ ಸರಿಯಲ್ಲ. ನನಗೆ, ಮೃತ ಶರಣಮ್ಮ ಮತ್ತು ಶಾರದಮ್ಮಳಿಗೆ ಮದುವೆ ಸಮಯದಲ್ಲಿ ನನ್ನ ತಂದೆ 3 ಲಕ್ಷ ಹಣ ಮತ್ತು 10 ತೊಲೆ ಬಂಗಾರವನ್ನು ನೀಡಿದ್ದು ಅ ಸಮಯದಲ್ಲಿ ಕುಟುಂಬದ ಸ್ವತ್ತಿನಲ್ಲಿನ ಹಕ್ಕನ್ನು ಬಿಟ್ಟು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವು ಹಕ್ಕನ್ನು ಬಿಟ್ಟು ಕೊಟ್ಟಿದ್ದರಿಂದ ದಾವ ಆಸ್ತಿಗಳಲ್ಲಿ ನಮಗೆ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಈಗ ದಾವ ಆಸ್ತಿಗಳ ಬೆಲೆ ಹೆಚ್ಚಾಗಿದ್ದರಿಂದ ಹಣ ಮತ್ತು ಬಂಗಾರ ಪಡೆದು ಹಕ್ಕನ್ನು ಬಿಟ್ಟುಕೊಟ್ಟಿರುವುದನ್ನು ಮುಚ್ಚಿಟ್ಟು ಭಾಗಕ್ಕಾಗಿ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

**(2, 4** ಮತ್ತು **5** ನೇ ಪ್ರತಿವಾದಿಯರು ಮತ್ತು ಅವರ ಪರ ವಕೀಲರುಗಳು ಗೈರು ಹಾಜರು ಇದ್ದು ಅವರ ಪರ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು**)**

<u>ಪಾಟೀ ಸವಾಲು: **6** ನೇ ಪ್ರತಿವಾದಿ ಪರ ಶ್ರೀ ಎಂ.ಎಂ ವಕೀಲರಿಂದ</u>

ನನ್ನ ಅಕ್ಕ ಮೃತ ಶಾರದಮ್ಮಳ ಭಾಗಕ್ಕೆ ಬಂದ ಸ್ವತ್ತಿನಲ್ಲಿ ಅವಳ ಮಗನಾದ 6 ನೇ ಪ್ರತಿವಾದಿ ನಾಗರಾಜನಿಗೆ ಭಾಗ ಇರುತ್ತದೆ ಎಂದರೆ ಸರಿ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.